ಮಾರಲು ತನ್ನ ಬಣ್ಣದ ಮಾತುಗಳನ್ನು ಉಪಯೋಗಿಸಿರಬೇಕು. ಮನು ತನ್ನನ್ನು ನಿಯಂತ್ರಿಸಿಕೊಳ್ಳಲು ತರ್ಕಬದ್ಧವಾಗಿ ಯೋಚಿಸತೊಡಗಿದ.

ಈ ವಿಷಯ ತನ್ನ ತಂದೆ ತಾಯಿಗಳಿಗೆ, ತಂಗಿ ರಂಜನಾಗೆ ತಿಳಿದರೆ ಹೇಗೆ ಪ್ರತಿಕ್ರಿಯಿಸಬಹುದು. ಇದರ ಜೊತೆ ಕೂತು ಒಂದು ಫೋಟೊ ತೆಗೆದು ಕಳಿಸಿದರೆ ನಾನು ಗುಟ್ಟಾಗಿ ಮದುವೆಯಾಗಿದ್ದೇನೆಂದೇ ತಿಳಿಯುತ್ತಾರೆ... ಖಂಡಿತಾ!

ಮನುಗೆ ಒಮ್ಮಲೇ ನೆನಪಾಯಿತು. ತಾನು ಮನೆಯವರೊಂದಿಗೆ ವಿಡಿಯೊ ಚಾಟ್ ಮಾಡುವಾಗ ಈ ರೊಬೊ ತನ್ನ ಹತ್ತಿರವೆಲ್ಲೂ ಕಾಣಿಸಬಾರದು. ಆ ಸಮಯದಲ್ಲಿ ಇದನ್ನು ಸ್ವಿಚ್ ಆಫ್ ಮಾಡುವುದೇ ಕ್ಷೇಮ! ಇಲ್ಲವಾದರೆ ಮನೆಯವರಿಗೆ ಅನುಮಾನ ಬರಬಹುದು!!

'ನೀವು ನಕ್ಕಿದ್ದು ಏಕೆಂದು ಹೇಳಲೇ ಇಲ್ಲ.'



ರೊಬೊ ಮತ್ತೆ ಕೇಳಿತು ವಿನಯದಿಂದ. ಇಷ್ಟು ನಾಜೂಕಾಗಿ ರೊಬೊವನ್ನು ಸೃಷ್ಟಿಸಬಹುದೆಂದು ಮನುವಿಗೆ ಎಂದೂ ಕಲ್ಪನೆ ಬಂದಿರಲಿಲ್ಲ.

'ಅದು...' ತಡವರಿಸಿದ.

'ಹೂಂ... ಅದು...'

'ಇಲ್ಲಾ... ನೋಡು ಈಗ...'

'ನನಗೆ ಹೆಸರಿದೆ... ನೀವೇ ಇಟ್ಟ ಹೆಸರು... ಕಮಲಾ... ತುಂಬಾ ಸುಂದರವಾದ ಹೆಸರು. ಬಹುಶಃ ಅದು ನನ್ನ ಕಣ್ಣುಗಳನ್ನು ನೋಡಿ ಇಟ್ಟ ಹೆಸರಲ್ಲವೆ?'

ಮನುಗೆ ದಿಗ್ಭ್ರಮೆಯಾಗುವುದು ಬಾಕಿ ಇತ್ತು! ತನ್ನ ಮನಸ್ಸನ್ನೂ ಈಕೆ ಓದಬಲ್ಲಳೆ?...

'ನಿನ್ನ ಕಣ್ಣು?... ಕಮಲಾ ನಿನ್ನ ಕಣ್ಣು ಹೇಗಿದೆಯೆಂದು ನಿನಗೆ ಹೇಗೆ ಗೊತ್ತು?' ಆಕೆ ಒಬ್ಬಳು ಯುವತಿಯೇನೋ ಎಂಬಂತೆ ಛೇಡಿಸಿದ.

'ಯಾಕೆ ಗೊತ್ತಿಲ್ಲ?...'

'ನಿನ್ನ ಮುಖ ನೀನು ಕನ್ನಡಿಯಲ್ಲಿ ನೋಡಿಕೊಂಡೇ ಇಲ್ಲ. ನಿನ್ನ ಕಣ್ಣುಗಳ ಆಕಾರ ನಿನಗೆ ಹೇಗೆ ಗೊತ್ತು?...'

'ಮೈ ಡಿಯರ್ ಮನು, ಅದೆಲ್ಲಾ ನನ್ನ ನೆನೆಪಿನಲ್ಲೇ ಇದೆ.'

ಮನು ಬೆಚ್ಚಿಬಿದ್ದ! 'ಮೈ ಡಿಯರ್ ಮನು...' ಏನು? ಇವು ಆಕೆಯ ಬಾಯಿಂದ ಮಾತುಗಳೇ ಅವು? ಅವಳಿಗೆ ಹೇಗೆ ಗೊತ್ತು ತನ್ನ ಹೆಸರು? ತಾನು ಹೇಳಿಯೇ ಇಲ್ಲವಲ್ಲ... ಮೈ ಡಿಯರ್ ಎನ್ನುವ ಈ ರೊಬೊ ಜೊತೆ ತನ್ನ ಸಂಬಂಧವೇನು?

'ನನ್ನ ಹೆಸರು ನಿನಗೆ ಹೇಗೆ ಗೊತ್ತು?'

ಭಯ ಮಿಶ್ರಿತ ಸಂಶಯದಿಂದ ಕೇಳಿದ ಮನು.